**ಅತ್ಯಾದ್ಯತೆ**

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ ಎಲ್ಲರೂ ಬೆಳೆಯೋಣ

**ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ, ರಾಜ್ಯ ಯೋಜನಾ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಸಶಿಅ/ಮಾ.ದಾ/NIEPA-NCSL/CSL/2018-19 ದಿನಾಂಕ: 28.09.2018

# ಸುತ್ತೋಲೆ

ವಿಷಯ: ಭಾರತ ದೇಶದಲ್ಲಿ ಶಾಲಾ ನಾಯಕತ್ವವನ್ನು ಗುರುತಿಸುವಿಕೆ ಮತ್ತು ಸಂಭ್ರಮಾಚರಣೆ ಬಗ್ಗೆ.

ಉಲ್ಲೇಖ: National Institute of Educational Planning and Administration, New Delhi ಇವರ ಪತ್ರ ಸಂಖ್ಯೆ: 51/NIEPA-NCSL/CSL/2018 Dated: 16.08.2018.

***********

ದೇಶದ ವಿವಿಧ ರಾಜ್ಯಗಳಲ್ಲಿ ಶಾಲಾ ನಾಯಕತ್ವದ ಬಗ್ಗೆ ನಡೆದಿರುವ ಯಶಸ್ವಿ ಪ್ರಯತ್ನ ಹಾಗೂ ಪ್ರಯೋಗಗಳನ್ನು National Institute of Educational Planning and Administration New Delhi ಇಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD) ಹೊಸದಾಗಿ ಪ್ರಾರಂಭಿಸಿರುವ Center for School Leadership (NCSL) ವತಿಯಿಂದ ಕ್ರೂಡೀಕರಿಸಿ ರಾಷ್ಟ್ರಮಟ್ಟದ ಇ-ಪೋರ್ಟಲ್‌ನಲ್ಲಿ ಪ್ರಕಟಿಸಲು ಕ್ರಮತೆಗೆದುಕೊಳ್ಳಲಾಗಿದೆ. ಈ ಬಗ್ಗೆ National Institute of Educational Planning and Administration, New Delhi ಇವರು ನಿಗದಿಪಡಿಸಿರುವ ಮಾರ್ಗಸೂಚಿಯನ್ನು ಈ ಸುತ್ತೋಲೆಗೆ ಲಗತ್ತಿಸಿದೆ.

ಆಯ್ದ ಅತ್ಯುತ್ತಮ 100 ಅಧ್ಯಯನಗಳನ್ನು (Case Study) ರಾಜ್ಯ ಮತ್ತು ರಾಷ್ಟ್ರಮಟ್ಟದ ಇ-ಪೋರ್ಟಲ್‌ನಲ್ಲಿ ಪರಸ್ಪರ ಹಂಚಿಕೊಳ್ಳಲಾಗುವುದು. ಶಾಲಾ ಹಂತದಲ್ಲಿನ ನಾಯಕತ್ವದ ಯಶಸ್ವಿ ಕಥನಗಳನ್ನು ರಾಷ್ಟ್ರ ಮಟ್ಟದ ಶಾಲಾ ನಾಯಕತ್ವ ಸಮಾವೇಶದಲ್ಲಿ ಹಂಚಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು.

**Case Study ಹಾಗೂ ಕ್ರೋಢೀಕ್ರಣದ ಪ್ರಕ್ರಿಯೆ 4 ಹಂತಗಳನ್ನು ಹೊಂದಿದೆ. ಶಾಲಾಹಂತದಿಂದ ಜಿಲ್ಲಾ ಉಪನಿರ್ದೇಶಕರ ಹಂತದವರೆಗೆ ತೆಗೆದುಕೊಳ್ಳಬೇಕಾದ ಕ್ರಮದ ಮಾರ್ಗಸೂಚಿ ಈ ಕೆಳಗಿನಂತಿದೆ:**

Case Study ಮತ್ತು ಶಾಲೆಯ ಬದಲಾವಣೆಯ ಪ್ರಕ್ರಿಯೆ ಬಗ್ಗೆ ಬೆಳಕು ಚೆಲ್ಲುವ ಹಾಗೂ ಶಾಲಾ ನಾಯಕತ್ವದ ಪರಿಕಲ್ಪನೆ ಮತ್ತು ನಡವಳಿಕೆಗಳನ್ನು ಅರ್ಥ ಮಾಡಿಕೊಳ್ಳುವ ಘಟನೆ/ಪ್ರಯತ್ನ/ಪ್ರಯೋಗಗಳನ್ನು ಒಳಗೊಂಡಿರಬೇಕು.

1. **<u>ಶಾಲಾಹಂತ:</u>**

- **Case Study ಯು ಎರಡು ಭಾಗಗಳನ್ನು ಹೊಂದಿದೆ:**
  - **Case Study ಭಾಗ I** : ಶಾಲೆ ಎದುರಿಸಿದ ಸವಾಲುಗಳು, ಕಂಡುಕೊಂಡ ಪರಿಹಾರಗಳು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಸ್ಥಿತ್ಯಂತರಗಳನ್ನು ಒಳಗೊಂಡ ಶಾಲಾ ಇತಿಹಾಸವನ್ನು ಸಂಕ್ಷಿಪ್ತವಾಗಿ ಎ4 ಸೈಜ್‌ನಲ್ಲಿ 1 ರಿಂದ 3 ಪುಟಗಳವರೆಗೆ Times New Roman, Font 12 ರಲ್ಲಿ ಸಿದ್ಧಪಡಿಸುವುದು. ಈ ಕೆಲಸವನ್ನು ಶಾಲಾ ಮುಖ್ಯಸ್ಥರು ಆಸಕ್ತ ಸಂಶೋಧಕರು ಅಥವಾ ಶೈಕ್ಷಣಿಕ ತಜ್ಞರು ಅಥವಾ ಆಡಳಿತಗಾರರು ಅಥವಾ ಸರ್ಕಾರೇತರ ಸಂಘಟನೆ ಮಾಡಬಹುದು.

2. **<u>ಮೇಲ್ವಿಚಾರಕರ ಹಂತ:</u>**

  - **Case Study ಭಾಗ II** : ಸದರಿ ಶಾಲೆಗೆ ಭೇಟಿ ನೀಡಿದ ಪರಿಣಿತರು/ವಿದ್ವಾಂಸರು ಶಾಲಾ ನಾಯಕತ್ವದ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ (Role of School Leadership) ಎ4 ಸೈಜ್‌ನಲ್ಲಿ 5 ರಿಂದ 10ಪುಟಗಳವರೆಗೆ Double space ನಲ್ಲಿ Times New Roman, Font

12 ರಲ್ಲಿ ಸಿದ್ಧಪಡಿಸುವುದು. ಶಾಲೆಯ ಸ್ಥಿತ್ಯಂತರದ (Transformed) ಕಾರಣಗಳನ್ನು ಆಳವಾಗಿ ಅರ್ಥ ಮಾಡಿಕೊಳ್ಳುವಂತಹ ಸನ್ನಿವೇಶ, ಪ್ರಸಂಗ, ಪ್ರಯತ್ನ, ಪ್ರಯೋಗಗಳ ಬಗ್ಗೆ ಬೆಳಕು ಚೆಲ್ಲುವುದು. ಅಲ್ಲದೆ ತರಗತಿಯ ಕೊಠಡಿಯಲ್ಲಿ ಶಿಕ್ಷಕರ ಬೋಧನೆ ಮತ್ತು ಮಕ್ಕಳ ಕಲಿಕೆಯ ಪ್ರಕ್ರಿಯೆಗಳು, ಸಮುದಾಯದ ಪಾಲ್ಗೊಳ್ಳುವಿಕೆ, ಒಟ್ಟಾರೆ ಶಾಲೆಯ ನಿರ್ವಹಣೆ, ಶಾಲೆಯ ಒಳಗೆ ಮತ್ತು ಹೊರಗೆ ಅಂತರ್ ವ್ಯಕ್ತಿಗಳ ಸಂಬಂಧ, ಸಂಶೋಧನೆಗಳು, ತಂಡದ ಕೆಲಸ, ಶಾಲೆಯ ಅಭಿವೃದ್ಧಿಗಾಗಿ ತಂತ್ರಾಂಶದ ಬಳಕೆ ಇತ್ಯಾದಿ,. ಅಂಶಗಳನ್ನು **Case Study** ಹೊಂದಿರಬೇಕು.

3. **ತಾಲ್ಲೂಕು ಹಂತ:**

ಕ್ಷೇತ್ರ ಶಿಕ್ಷಣಾಧಿಕಾರಿಗಳು ಅವರ ವ್ಯಾಪ್ತಿಯಲ್ಲಿನ ಎಲ್ಲಾ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ. ಕಳಪೆ ಸಾಧನೆಯ ಶಾಲೆಗಳ ಪಟ್ಟಿ ಸಿದ್ಧಪಡಿಸಿಕೊಂಡು ಅಂತಹ ಶಾಲೆಗಳಿಗೆ ನಿಯಮಿತವಾಗಿ ಭೇಟಿ ನೀಡಿ ಗುಣಮಟ್ಟ ಸುಧಾರಣೆಗಾಗಿ ಕ್ರಿಯಾಯೋಜನೆ ಸಿದ್ಧಪಡಿಸಿಕೊಂಡು ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡುವುದು.

ಅಲ್ಲದೆ, ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಶಾಲೆಗಳ ಮುಖ್ಯಸ್ಥರ ಕಾರ್ಯಕ್ಷಮತೆ, ಒಟ್ಟಾರೆ ಶಾಲಾ ಕಾರ್ಯ ನಿರ್ವಹಣೆಯ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಉತ್ತಮ ಗುಣಮಟ್ಟ ಸಾಧನೆಗೆ ಕಾರಣವಾದ ಅಂಶಗಳನ್ನು ಭೇಟಿ ಸಮಯದಲ್ಲಿ ದಾಖಲಿಸಿ, ನೀಡಿರುವ ಮಾರ್ಗಸೂಚಿಯನ್ವಯ Case Study ಸಿದ್ಧಪಡಿಸುವುದು ಅಥವಾ ಸಿದ್ಧಪಡಿಸಲು ಸಮರ್ಪಕ ವ್ಯಕ್ತಿಗಳ ತಂಡ ರಚಿಸುವುದು ಅಥವಾ ಒಂದೊಂದು ಶಾಲೆಯ **Case Study** ಸಿದ್ಧಪಡಿಸಲು ಒಬ್ಬೊಬ್ಬರಿಗೆ ಜವಾಬ್ದಾರಿ ವಹಿಸುವುದು.

ಅಂತಹ ಎಲ್ಲಾ Case Study ಗಳ ಬಗ್ಗೆ ವಾರಕ್ಕೊಮ್ಮೆ ಸಿ.ಆರ್.ಪಿ, ಬಿ.ಆರ್.ಪಿ, ಇ.ಸಿ.ಓ ಮತ್ತು ಬಿ.ಆರ್.ಸಿ ಒಳಗೊಂಡಂತೆ ಗಂಭೀರವಾಗಿ ಚರ್ಚಿಸಿ ಒಳ್ಳೆಯ ಅಭ್ಯಾಸಗಳನ್ನು ಕಳಪೆ ಶಾಲೆಗಳಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡುವುದು. ಶಾಲಾ ನಾಯಕತ್ವದ ಪರಿಕಲ್ಪನೆ, ಮಹತ್ವ ಮತ್ತು ನಡವಳಿಕೆಗಳನ್ನು ಓದುಗರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ವೈಯಕ್ತಿಕ ಗಮನ ನೀಡಿ ತಾಲ್ಲೂಕಿಗೆ ಕನಿಷ್ಠ 2 Case Study ಸಿದ್ಧಪಡಿಸುವುದು.

4. **ಜಿಲ್ಲಾ ಹಂತ:**

ಉಪನಿರ್ದೇಶಕರು (ಆಡಳಿತ) ಮತ್ತು ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಅಭಿವೃದ್ಧಿ ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಮಟ್ಟದ ವರಿಷ್ಠಾಧಿಕಾರಿಗಳಾಗಿದ್ದು, ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ವೈಯಕ್ತಿಕ ಕಾಳಜಿವಹಿಸಿ ಸಮಸ್ಯಾತ್ಮಕ ಶಾಲೆಗಳಿಗೆ ಆದ್ಯತೆಯ ಮೇಲೆ ವೈಯಕ್ತಿಕವಾಗಿ ಹಾಗೂ ತಂಡಗಳಲ್ಲಿ ಭೇಟಿ ನೀಡಿ, ಗುಣಮಟ್ಟ ಸುಧಾರಣೆಗೆ ಸೂಕ್ತ ಮಾರ್ಗದರ್ಶನವನ್ನು ಸಂದರ್ಶನ ವಹಿಯಲ್ಲಿ ದಾಖಲಿಸಿ, ಅನುಪಾಲನೆಗೆ ದಿನಾಂಕ ನಿಗದಿಪಡಿಸಿ, ತದನಂತರ 2 ಅಥವಾ 3 ನೇ ಹಂತದ ಭೇಟಿ ನೀಡಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಕಲಿಕೆಯ ಗುಣಮಟ್ಟವನ್ನು ಸುಧಾರಿಸಲು ಕ್ರಮ ತೆಗೆದುಕೊಳ್ಳುವುದು.

ಅಲ್ಲದೆ ಜಿಲ್ಲಾ ವ್ಯಾಪ್ತಿಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಶಿಕ್ಷಕರು ಹಾಗೂ ಶಾಲೆಗಳನ್ನು ಗುರುತಿಸಿ ಶಾಲಾ ನಾಯಕತ್ವದ ಪರಿಕಲ್ಪನೆಯ ಹೊಸ ಆಯಾಮಗಳನ್ನು ಪರಿಚಯಿಸುವಂತಹ ಕಥನಗಳಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗುರುತಿಸಿದ ಅಥವಾ ಜಿಲ್ಲಾಮಟ್ಟದ ಅಧಿಕಾರಿಗಳೇ ಗುರುತಿಸಿದ ಶಾಲೆಗಳ Case Study ಗಳನ್ನು ಸಿದ್ಧಪಡಿಸುವುದು. ವಿವಿಧ ಆಯಾಮ, ಪ್ರಯೋಗ, ಪರಿಶ್ರಮಗಳನ್ನು ಒಳಗೊಂಡ ಕನಿಷ್ಠ 1 ಅತ್ಯುತ್ತಮ ಸರ್ಕಾರಿ ಶಾಲೆಯ Case Study ಯನ್ನು ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಇವರಿಗೆ ನಿಗದಿತ ಸಮಯದೊಳಗೆ ಇ-ಮೇಲ್ ಮೂಲಕ ಸಲ್ಲಿಸುವುದು.

**Case Study ಶಾಲಾ ನಾಯಕತ್ವದ ಈ ಕೆಳಕಾಣಿಸಿದ ಯಾವುದಾದರು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ವಿಷಯಗಳನ್ನು ಒಳಗೊಂಡಿರಬಹುದು.**

- ಶಾಲಾ ನಾಯಕತ್ವದ ಪರಿಕಲ್ಪನೆ ಮತ್ತು ಪ್ರಕ್ರಿಯೆಗಳು
- ಸ್ವಂತ ಮತ್ತು ಇತರರ ಅಭಿವೃದ್ಧಿ – ವೈಯಕ್ತಿಕ ಮತ್ತು ವೃತ್ತಿ ಬೆಳವಣಿಗೆ

- ಸಂಶೋಧನೆಯ ಮೂಲಕ ಕನಸಿನ ಶಾಲೆಗಳನ್ನು ನನಸು ಮಾಡುವಿಕೆ
- ಬೋಧನಾ ಕಲಿಕಾ ಪ್ರಕ್ರಿಯೆಗಳ ಸುಧಾರಣೆ
- ಶಾಲಾ ಆಡಳಿತ ಸುಧಾರಣೆ

**ವಿ.ಸೂ: ವಿವರಗಳಿಗೆ ನವದೆಹಲಿಯ ಮಾರ್ಗಸೂಚಿ ನೋಡಿ**

**ಪ್ರತಿ Case Study ಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು:**

- Case Study ಯ ಶೀರ್ಷಿಕೆ :
- Case Study ಬರಹಗಾರರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಇ-ಮೇಲ್ /ಫ್ಯಾಕ್ಸ್ ಮಾಹಿತಿ.
- ಶಾಲೆಯ ಸಂಕ್ಷಿಪ್ತ ಚಿತ್ರಣ
- ಶಾಲೆಯ ಪ್ರಸಕ್ತ ಸನ್ನಿವೇಶ – ಸೌಲಭ್ಯಗಳು ಮತ್ತು ಕೊರತೆಗಳು
- ಶಾಲೆಯ ಸವಾಲುಗಳು, ಸಂಧಿಗ್ದಗಳು
- ಕ್ರಿಯಾಯೋಜನೆ, ಕಾರ್ಯತಂತ್ರ, ಫಲಗಳು
- ಕಲಿಕೆಯಲ್ಲಿ ಬದಲಾವಣೆ ತರಲು ತೆಗೆದುಕೊಂಡ ಕ್ರಮಗಳು
- ಶಾಲಾ ನಾಯಕತ್ವದ ಪಾತ್ರ
- ಬದಲಾವಣೆಯ ಸಿದ್ಧಾಂತ- ಬದಲಾವಣೆಗೆ ಅನುಸರಿಸಿದ ತಂತ್ರ/ಮಂತ್ರ

**ಸಾಮಾನ್ಯ ಸೂಚನೆಗಳು:**

- **Case Study** ಯ ಶೀರ್ಷಿಕೆ : Celebrating School Leadership- Recognizing School Leaders ಎಂದು ಇರಲಿ.
- ಶಾಲಾ ನಾಯಕತ್ವದ ಸಂಭ್ರಮಾಚರಣೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಇ-ಪೋರ್ಟಲ್‌ನಲ್ಲಿ ಇತರೆ ಶಾಲೆಗಳಿಗೆ ಮಾದರಿಯಾಗುವಂತಹ Case Study ಸಿದ್ಧಪಡಿಸುವುದು.
- **Case Study** ಶಾಲಾ ನಾಯಕತ್ವದ ಮಹತ್ವವನ್ನು ಸಾರುವಂತಿರಬೇಕು.
- ಅನಗತ್ಯ ಫೋಟೋ ಅಥವಾ ವೀಡಿಯೋ ಸೇರ್ಪಡೆಗೆ ಅವಕಾಶವಿಲ್ಲ. ತೀರಾ ಅಗತ್ಯವೆನಿಸಿದ ಅತ್ಯುತ್ತಮವಾದ ನಾಲ್ಕೈದು ಫೋಟೋ / ವೀಡಿಯೋ ಗಳಿಗೆ ಸೀಮಿತಗೊಳಿಸುವುದು. ಬದಲಾವಣೆಗೆ ಮೊದಲು ಮತ್ತು ನಂತರದ ಚಿತ್ರಣಗಳನ್ನು ಒಳಗೊಂಡಿರಬೇಕು.

ಭಾರತ ದೇಶದ ಪ್ರಸಕ್ತ ಸನ್ನಿವೇಶದಲ್ಲಿ ನಾಯಕತ್ವದ ಬಗ್ಗೆ ಹೊಸ ಸಿದ್ಧಾಂತ ಅಥವಾ Case Study ಅಧ್ಯಯನದಿಂದ ಕಲಿಕೆಗೆ ಪೂರಕವಾಗುವ, ದೇಶದಾದ್ಯಂತ ನಡೆದಿರುವ ನಾಯಕತ್ವದ ಆಚರಣೆಗಳು ಅಥವಾ ಶಾಲಾ ನಾಯಕತ್ವದ ಹೊಸ ಮಾದರಿಗಳನ್ನು ಹುಟ್ಟು ಹಾಕುವಂತಹ ಅಂಶಗಳನ್ನು Case Study ಯು ಹೊಂದಿರಬೇಕು.

ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಮಕ್ಕಳು ಉಲ್ಲಾಸದಾಯಕವಾಗಿ ಕಲಿಯಲು ಪ್ರೇರಣೆ ನೀಡಿ ಗುಣಮಟ್ಟದ ಶಿಕ್ಷಣ ನೀಡಬೇಕಾಗಿರುವ ಹಿನ್ನೆಲೆಯಲ್ಲಿ ಶಾಲಾ ಹಂತದಲ್ಲಿ ನಡೆದಿರುವ ವಿಶಿಷ್ಠ ಹಾಗೂ ವಿಭಿನ್ನ ಪ್ರಯತ್ನಗಳು ಹಾಗೂ ಪ್ರಯೋಗಗಳನ್ನು ಕ್ರೋಢೀಕರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಶೈಕ್ಷಣಿಕ ವಲಯದಿಂದ ಈ ಪತ್ರದೊಂದಿಗೆ ಲಗತ್ತಿಸಿರುವ ಮಾರ್ಗಸೂಚಿ ಅನ್ವಯ ಅತ್ಯುತ್ತಮ 2 ಶಾಲೆಗಳ ಯಶಸ್ವಿ ಕಥನಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು Case Study ರೂಪದಲ್ಲಿ ಸಿದ್ಧಪಡಿಸಿ **ದಿನಾಂಕ: 10.10.2018** ರೊಳಗೆ ಉಪನಿರ್ದೇಶಕರು (ಆಡಳಿತ) ಇವರಿಗೆ ಸಲ್ಲಿಸಲು ತಿಳಿಸಿದೆ. ಉಪನಿರ್ದೇಶಕರು (ಆಡಳಿತ) ಇವರು ಪ್ರತಿ ತಾಲ್ಲೂಕಿಗೆ ಒಂದು ಅತ್ಯುತ್ತಮ ಶಾಲೆಯ Case Study ಯನ್ನು ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಇವರಿಗೆ ದಿನಾಂಕ: 20.10.2018 ರೊಳಗೆ ಸಲ್ಲಿಸಲು ತಿಳಿಸಿದೆ.

ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಶಾಲೆಗಳನ್ನು ಸಬಲೀಕರಿಸುವ ದಿಕ್ಕಿನಲ್ಲಿ ಅತ್ಯುತ್ತಮ ಶಿಕ್ಷಕರನ್ನು/ ಶಾಲೆಗಳನ್ನು ಗುರುತಿಸುವ ಹಾಗೂ ಯಶಸ್ವಿ ಕಥನಗಳ ಬಗ್ಗೆ ರಾಷ್ಟ್ರಮಟ್ಟದ ಸಂಭ್ರಮಾಚರಣೆಯ ಮೌಲ್ಯಯುತ ಕ್ರಿಯೆಯಲ್ಲಿ ಶಿಕ್ಷಣ ಕ್ಷೇತ್ರದ ಎಲ್ಲರೂ ತೊಡಗಿಕೊಳ್ಳುವಂತೆ ಕ್ರಮತೆಗೆದುಕೊಳ್ಳಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ-ಬೆಂಗಳೂರು

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ –ಕರ್ನಾಟಕ

**ಇವರಿಗೆ**

1. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಡಿವೈಪಿಸಿ) ಸರ್ವ ಶಿಕ್ಷಣ ಅಭಿಯಾನ ಇವರಿಗೆ ಅಗತ್ಯ ಕ್ರಮ ಮತ್ತು ಅನುಸರಣೆಗಾಗಿ.

**ಇವರಿಗೆ ಮಾಹಿತಿಗಾಗಿ**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ
4. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ(ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಡಿ.ಎಸ್.ಇ.ಆರ್.ಟಿ, ಅಲ್ಪಸಂಖ್ಯಾತ ಭಾಷೆಗಳು, ಧಾರವಾಡ, ಗುಲ್ಬರ್ಗಾ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು)
5. ಪ್ರಾಂಶುಪಾಲರು ಸಿ.ಟಿ.ಇ, ಮೈಸೂರು., ಚಿತ್ರದುರ್ಗ, ಜಮಖಂಡಿ ಮತ್ತು ಗುಲ್ಬರ್ಗ.
6. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ, ಮೈಸೂರು; (ವಿಭಾಗೀಯ ಕಛೇರಿಗಳು)
7. ಮುಖ್ಯ ಲೆಕ್ಕಾಧಿಕಾರಿಗಳು, ಲೆಕ್ಕಶಾಖೆ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಮಾಹಿತಿಗಾಗಿ
8. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ
9. ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.